# ರಾಜ್ಯದಲ್ಲಿ ಇನ್ನಷ್ಟು ಕೈಗಾರಿಕೆಗಳ ಸ್ಥಾಪನೆ

## ಕುಡಿತಿನಿ ಬಳಿ ಸಿಮೆಂಟ್ ಘಟಕಕ್ಕೆ ಚಾಲನೆ

▪ ವಿಕ ಸುದ್ದಿಲೋಕ ಬಳ್ಳಾರಿ

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ, ಬೆಳವಣಿಗೆಗೆ ಇನ್ನಷ್ಟು ಪ್ರೋತ್ಸಾಹ ನೀಡಲಾಗುವುದು ಎಂದು ಪ್ರವಾಸೋದ್ಯಮ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಜಿ.ಜನಾರ್ದನರೆಡ್ಡಿ ಹೇಳಿದ್ದಾರೆ.

ಸಮೀಪದ ಕುಡಿತಿನಿ ಬಳಿ ಎಸಿಸಿ ಸಿಮೆಂಟ್ ಕಾರ್ಖಾನೆ ಉದ್ಘಾಟಿಸಿ ಸೋಮ ವಾರ ಮಾತನಾಡಿ, ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ವಿಜಯನಗರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ಕೈಗಾರಿಕೆಗಳ ಸಮೂಹ ಜಿಲ್ಲೆಯಲ್ಲಿ ನೆಲೆಗೊಳ್ಳಬೇಕು. ಜಿಲ್ಲೆಯ ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಕೈಗಾರಿಕೆಗಳ ನೆರವು ಸಿಗಬೇಕು ಎಂಬುದು ತಮ್ಮ ಉದ್ದೇಶ ಎಂದರು.

ಎಸಿಸಿ ಕಾರ್ಖಾನೆ ಸ್ಥಾಪನೆ ಹರ್ಷ ತಂದಿದೆ. ಕೈಗಾರಿಕೆ ನಕ್ಷೆಯಲ್ಲಿ ಜಿಲ್ಲೆಯ ಸ್ಥಾನ ಮತ್ತಷ್ಟು ಹೆಚ್ಚಬೇಕು. ಟಾಟಾ ಸ್ಟೀಲ್ಸ್ ಸೇರಿ ಬೃಹತ್ ಉದ್ಯಮಿಗಳು ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸಲು ಆಸಕ್ತಿ ವಹಿಸಿರುವುದು ಮಹತ್ವದ ಬೆಳವಣಿಗೆ ಎಂದರು.

ಆಡಳಿತ ಮಂಡಳಿಯ ನಿರ್ದೇಶಕ ಸುಮೀತ್ ಬ್ಯಾನರ್ಜಿ ಮಾತನಾಡಿ, ಚಿಕ್ಕಬಳ್ಳಾಪುರ ಮತ್ತು ಕುಡಿತಿನಿಯಲ್ಲಿ ಎಸಿಸಿ ಕಂಪನಿ 2 ಕಾರ್ಖಾನೆ ಆರಂಭಿಸಿದೆ ಎಂದರು. ವಿಧಾನ ಪರಿಷತ್ ಸದಸ್ಯ ಮೃತ್ಯುಂಜಯ ಜಿನಗಾ, ಜಿ.ಪಂ. ಅಧ್ಯಕ್ಷ ಎನ್.ರುದ್ರಗೌಡ, ಹಾಲು ಒಕ್ಕೂಟದ ಅಧ್ಯಕ್ಷ ವೈ.ತಿಮ್ಮಾರೆಡ್ಡಿ, ಮೇಯರ್ ಕೆ.ಬಸವರಾಜ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗುರುಲಿಂಗನಗೌಡ, ನೈಋತ್ಯ ರೈಲ್ವೆ ವಲಯದ ಅಧಿಕಾರಿ ಆದರ್ಶ ಮಿಶ್ರಾ, ಕಂಪನಿ ಅಧಿಕಾರಿಗಳಾದ ರವೀಂದ್ರ ಮೋಹನ್, ಸುನಿಲ್ ಗುಪ್ತಾ, ಆರ್. ನರೇಂದ್ರಕುಮಾರ್, ಉಪವಿಭಾಗಾಧಿಕಾರಿ ಕಾಶೀನಾಥ್ ಪವಾರ ಇದ್ದರು.

ವಿಕ ಚಿತ್ರಲೋಕ




ಕುಡಿತಿನಿ ಬಳಿ ಎಸಿಸಿ ಸಿಮೆಂಟ್ ಕಾರ್ಖಾನೆಯನ್ನು ಸಚಿವ ಜಿ.ಜನಾರ್ದನರೆಡ್ಡಿ ಸೋಮವಾರ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಮೃತ್ಯುಂಜಯ ಜಿನಗಾ, ಕಂಪನಿ ಆಡಳಿತ ಮಂಡಳಿ ನಿರ್ದೇಶಕ ಸುಮೀತ್ ಬ್ಯಾನರ್ಜಿ ಇತರರಿದ್ದರು.

### ಪರಿಸರ ಸ್ನೇಹಿ

ಎಸಿಸಿ ಕಾರ್ಖಾನೆ ಪರಿಸರ ಸ್ನೇಹಿಯಾಗಿದೆ. ಸಿಮೆಂಟ್ ತಯಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿದ್ದು, ಪರಿಸರ ಮಾಲಿನ್ಯ ಆಗದು. ಘನ ತ್ಯಾಜ್ಯಗಳ ಉತ್ಪಾದನೆ ಇಲ್ಲ. ಅತ್ಯಾಧುನಿಕ ಹಾರುಬೂದಿ ನಿಯಂತ್ರಣ ವ್ಯವಸ್ಥೆಯಿಂದ ಗಾಳಿಯಲ್ಲಿ ಯಾವುದೇ ಅಪಾಯಕಾರಿ ಅಂಶ ಇಲ್ಲ. ನೀರಿನ ಮಿತಬಳಕೆ, ಮರುಬಳಕೆ, ಸಾವಯವ ಕೃಷಿಯ ಪರಿಕಲ್ಪನೆಯ ಸಾಕಾರಕ್ಕೆ ಘಟಕ ಸಹಕಾರಿಯಾಗಲಿದೆ. ಸುಮಾರು 370 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಿರುವ ಕಾರ್ಖಾನೆಯಿಂದ ವಾರ್ಷಿಕ 1.2 ಮಿಲಿಯ ಟನ್ ಸಿಮೆಂಟ್ ಉತ್ಪಾದನೆಯಾಗುತ್ತದೆ. ಕಚ್ಚಾವಸ್ತುವನ್ನು ಗುಲ್ಬರ್ಗದ ವಾಡಿಯಿಂದ ತರಲಾಗುತ್ತದೆ. ದೇಶದಲ್ಲಿ ಪೋರ್ಟ್‌ಲ್ಯಾಂಡ್ ಸಿಮೆಂಟ್ ಉತ್ಪಾದಿಸುವ 4ನೇ, ರಾಜ್ಯದ ಮೊದಲ ಘಟಕ ಇದಾಗಲಿದೆ. ಘಟಕದಿಂದ 1,200 ಜನರಿಗೆ ಉದ್ಯೋಗ, ಹಲವು ಉಪ ಕೈಗಾರಿಕೆಗಳ ಆರಂಭಕ್ಕೆ ಅವಕಾಶ ದೊರೆಯಲಿದೆ ಎಂದು ಕಂಪನಿ ಆಡಳಿತ ಮಂಡಳಿ ನಿರ್ದೇಶಕ ಸುಮೀತ್ ಬ್ಯಾನರ್ಜಿ ತಿಳಿಸಿದರು.